


**ಸಂಚಿಕೆ: 05** **ಅಕ್ಟೋಬರ್–ಡಿಸೆಂಬರ್ 2018** **ಸಂಪುಟ: 01**

## ಗೌರವಾನ್ವಿತ ಕುಲಪತಿಗಳ ನುಡಿಗಳು



ರೈತರ ಕ್ಷೇತ್ರದಲ್ಲಿ ನೂತನ ತಾಂತ್ರಿಕತೆಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ಅಳವಡಿಸಿ ಬೆಳೆಯ ವಿವಿಧ ಹಂತಗಳಲ್ಲಿ ಕ್ಷೇತ್ರ ಭೇಟಿ ಕೊಟ್ಟು ರೈತರಿಗೆ ಪೂರಕ ಸಲಹೆಗಳನ್ನು ನೀಡುತ್ತಿರುವುದರ ಜೊತೆಗೆ ತರಬೇತಿಗಳ ಮೂಲಕ ತಾಂತ್ರಿಕತೆಯ ಅರಿವನ್ನು ಮೂಡಿಸುತ್ತಿರುವುದು ಸಂತೋಷದ ವಿಷಯವಾಗಿದೆ. ಕೃಷಿ ಕ್ಷೇತ್ರದಲ್ಲಿ ರೈತರ ಮತ್ತು ರೈತ ಮಹಿಳೆಯರ ಕ್ಷಮತೆಯನ್ನು ಹೆಚ್ಚಿಸುವದಕ್ಕಾಗಿ **'ರೈತ ದಿನಾಚರಣೆ ಮತ್ತು ರೈತ ಮಹಿಳಾ ದಿನಾಚರಣೆ'** ಯಂತಹ ಕಾರ್ಯಕ್ರಮಗಳು ಪ್ರೇರಕವಾಗಿವೆ. ಮಣ್ಣಿನ ಸಂರಕ್ಷಣೆ ಮತ್ತು ಮಣ್ಣಿನ ಆರೋಗ್ಯದ ಬಗ್ಗೆ **"ವಿಶ್ವ ಮಣ್ಣು ದಿನಾಚರಣೆ"** ಯ ಮೂಲಕ ರೈತರಲ್ಲಿ ಜಾಗೃತಿ ಮೂಡಿಸುತ್ತಿರುವುದು ಉತ್ತಮ ಕೆಲಸವಾಗಿದ್ದು **'ಸ್ವಚ್ಚತಾ ಪಾಕ್ಷೀಕ'**ದಂತಹ ಕಾರ್ಯಕ್ರಮದ ಅಡಿಯಲ್ಲಿ ತ್ಯಾಜ್ಯಗಳ ಮರುಬಳಕೆಯ ವಿಧಾನವನ್ನು ರೈತರಲ್ಲಿ ಅರಿವು ಮೂಡಿಸುತ್ತಿರುವುದು ವಿಶೇಷವಾಗಿದೆ. **'ರೈತ ಕ್ಷೇತ್ರ ಪಾಠಶಾಲೆ'** ಮತ್ತು **'ಸಮಸ್ಯಾತ್ಮಕ ಕ್ಷೇತ್ರ ಭೇಟಿ'**ಯಂತಹ ಚಟುವಟಿಕೆಗಳನ್ನು ಮಾಡುತ್ತಿರುವುದು ಕೃಷಿಕರಿಗೆ ನೆರವಾಗುವುದು. ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ **"ರೈತ ಉತ್ಪಾದಕರ ಸಂಸ್ಥೆ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಪರ್ಕ"** ಕಾರ್ಯಕ್ರಮವನ್ನು ಕೋಲಾರ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಅನುಷ್ಠಾನಗೊಳಿಸಿ, ಪ್ರಾತ್ಯೆಕ್ಷಿಕೆ, ತರಬೇತಿ ಮತ್ತು ಕ್ಷೇತ್ರ ಭೇಟಿಯನ್ನು ಮಾಡಿ ರೈತರ ಹಿತ ಕಾಪಾಡುವಲ್ಲಿ ನೆರವಾಗುತ್ತಿದ್ದು ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲೆಂದು ಹಾರೈಸುವೆ.

## ರೈತ ಮಹಿಳಾ ದಿನಾಚರಣೆ (ಕಿಸಾನ್‌ಮಹಿಳಾ ದಿವಸ್) –2018



ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ, ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ, ಕೋಲಾರ, ಕೃಷಿ ಇಲಾಖೆ, ಶ್ರೀನಿವಾಸಪುರ, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ **"ರೈತ ಮಹಿಳಾ ದಿನಾಚರಣೆ 2018"** ನ್ನು ದಿನಾಂಕ: 15.10.2018 ರಂದು ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಶ್ರೀ. ಜಗದೀಶ್, ಐ.ಎ.ಎಸ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ರವರು ಉದ್ಘಾಟಿಸಿದರು. ಭಾರತ ಕೃಷಿ ಪ್ರಧಾನ ದೇಶವಾಗಿರುವುದರಿಂದ ರೈತ ಮಹಿಳೆಯರನ್ನು ಕೃಷಿ



ಚಟುವಟಿಕೆಯಲ್ಲಿ ಉತ್ತೇಜಿಸುವದರೊಂದಿಗೆ ದೇಶದ ಆರ್ಥಿಕತೆಯ ಸಬಲತೆಯನ್ನು ವೃದ್ಧಿಪಡಿಸುವ ನಿಟ್ಟಿನಲ್ಲಿ ರೈತ ಮಹಿಳಾ ದಿನಾಚರಣೆಯನ್ನು ಪ್ರತಿ ವರ್ಷ ಆಚರಿಸಲಾಗುತ್ತಿದೆ. ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರ ಜೊತೆಯಲ್ಲಿ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ ಮತ್ತು ಮಾರುಕಟ್ಟೆಯ ನಿರ್ವಹಣೆಯಲ್ಲಿಯೂ ಸಹ ರೈತ ಮಹಿಳೆಯರು ಮೇಲುಗೈ ಸಾಧಿಸಿದ್ದಾರೆ ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ರೈತ ಮಹಿಳೆಯರನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಡಾ. ಶಿವಕುಮಾರ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೋಲಾರರವರು ಮಾತನಾಡಿ, ರೈತ ಮಹಿಳೆಯರು ಇತ್ತೀಚಿನ ದಿನಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ಮಹತ್ತರವಾದ ಸಾಧನೆಯನ್ನು ಮೆರೆಯುವದರೊಂದಿಗೆ ರೈತರಿಗೆ ಸಮಾನರಾಗಿ ಕೃಷಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರೈತ ಮಹಿಳಾ ದಿನಾಚರಣೆಯಂತಹ ಕಾರ್ಯಕ್ರಮವು ರೈತ ಮಹಿಳೆಯರ ಕ್ಷಮತೆಯನ್ನು ಕೃಷಿ ಕ್ಷೇತ್ರದಲ್ಲಿ ಹೆಚ್ಚಿಸುವದರೊಂದಿಗೆ ವೈಜ್ಞಾನಿಕ ಮಾಹಿತಿಗಳನ್ನು ನೀಡಿ, ಕೃಷಿ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಸೂಚಿಸುವಲ್ಲಿ ಪ್ರೇರಕವಾಗಿದೆ ಎಂದು ರೈತ ಮಹಿಳಾ ದಿನಾಚರಣೆಯ ಮಹತ್ವದ ಅರಿವನ್ನು ಮೂಡಿಸಿದರು. ತೋಟಗಾರಿಕೆ ಮಹಾವಿದ್ಯಾಲಯದ ಡೀನರಾದ ಡಾ. ಬಿ.ಜಿ. ಪ್ರಕಾಶ್ ರವರು ಮಾತನಾಡಿ, ರಾಜ್ಯದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟವು ರೈತ ಮತ್ತು ರೈತ ಮಹಿಳೆಯರ ಅಭಿವೃದ್ಧಿಯಲ್ಲಿ ಸದಾಕಾಲ ಶ್ರಮಿಸುತ್ತಿದ್ದು, ನೂತನ ತಂತ್ರಜ್ಞಾನಗಳನ್ನು ತೋಟಗಾರಿಕೆ ಬೆಳೆಗಳಲ್ಲಿ ಅಭಿವೃದ್ಧಿಪಡಿಸಿ ರೈತ ಸಮುದಾಯಕ್ಕೆ ಮಾರ್ಗದರ್ಶನವಾಗಿ ಪರಿಣಮಿಸಿದೆ. ರೈತರಿಗಷ್ಟೇ ಅಲ್ಲದೇ ರೈತ ಮಹಿಳೆಯರಿಗೂ ಕೂಡ ಕೃಷಿ ಸಂಬಂಧಿತ ವಿವಿಧ ಚಟುವಟಿಕೆಗಳಲ್ಲಿ ಮಾರ್ಗದರ್ಶನ ನೀಡುತ್ತಿದ್ದು, ರೈತ ಮಹಿಳೆಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಕೆ. ತುಳಸಿರಾಮ್, ಹಿರಿಯ ವಿಜ್ಞಾನಿಗಳು ಹಾಗು ಮುಖ್ಯಸ್ಥರು, ಕೆ.ವಿ.ಕೆ., ಕೋಲಾರ ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ್ದರು.

## ವಿಶ್ವ ಮಣ್ಣು ದಿನಾಚರಣೆ–2018



ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆ, ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ ರೈತರಿಗೆ **"ವಿಶ್ವ ಮಣ್ಣು ದಿನ–2018"** ಕಾರ್ಯಕ್ರಮವನ್ನು ದಿನಾಂಕ 05.12.2018 ರಂದು ತೋಟಗಾರಿಕೆ ಮಹಾವಿದ್ಯಾಲಯ ಆವರಣ, ಟಮಕ, ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಉದ್ಘಾಟನೆಯನ್ನು ನೆರವೇರಿಸಿದ ಶ್ರೀ. ಡಿ. ಎಲ್. ನಾಗರಾಜು, ಅಧ್ಯಕ್ಷರು, ಜಿಲ್ಲಾ ಕೃಷಿಕ ಸಮಾಜ, ಕೋಲಾರ, ಇವರು ಮಾತನಾಡಿ ಇತ್ತೀಚೆಗೆ ಮಣ್ಣಿನ ಫಲವತ್ತತೆಯು ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಕಳೆದುಕೊಳ್ಳುತ್ತಿದ್ದು, ವಿಜ್ಞಾನಿಗಳು ಮಣ್ಣಿನ ಫಲವತ್ತತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಭೂಮಿಯನ್ನು ಸಾವಯವ ಕೃಷಿಯಿಂದ ಅಭಿವೃದ್ಧಿಪಡಿಸುವುದು ರೈತರ ಆದಮ್ಯ ಕರ್ತವ್ಯವಾಗಿದೆ ಎಂದರು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶ್ರೀ. ಎಸ್. ಎನ್. ಮಂಜುನಾಥಗೌಡರವರು ಮಾತನಾಡಿ ಅಧಿಕ ಇಳುವರಿ ಪಡೆಯಲು ಹೆಚ್ಚು ರಾಸಾಯನಿಕಗಳ ಬಳಕೆ ಮಾಡಿ ಬೆಳೆ ಪಡೆಯುವದರ ಬದಲು ರಾಸಾಯನಿಕಗಳ ಹಾಗೂ ಕ್ರಿಮಿನಾಶಕಗಳ ಬಳಕೆ ಕಡಿಮೆ ಮಾಡಿ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬೇಕೆಂದು ಹೇಳಿದರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಟಿ. ಬಿ. ಬಸವರಾಜುರವರು ಮಾತನಾಡಿ, ಮಣ್ಣು ಬಹಳ ಮುಖ್ಯವಾದದ್ದು, ಮಣ್ಣು ಇಲ್ಲದಿದ್ದರೆ ಜೀವರಾಶಿ ಇರಲು ಸಾಧ್ಯವಿಲ್ಲ. ಆರೋಗ್ಯಯುತ ಮಣ್ಣು ಬೆಳೆಗೆ ಆಧಾರ. ವಿವೇಚನದಿಂದ ಕೀಟನಾಶಕಗಳ ಬಳಕೆ, ರಾಸಾಯನಿಕಗಳ ಬಳಕೆ ಅವಶ್ಯಕತೆಗನುಗುಣವಾಗಿ ಬಳಸಬೇಕು. ಮಣ್ಣಿನ ಆರೋಗ್ಯ ಕಾಪಾಡಲು ಸಾವಯವ

ಗೊಬ್ಬರದ ಬಳಕೆ ಮಾಡಿ ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳುವುದು ಅಗತ್ಯವೆಂದು ಹೇಳಿದರು. ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರದ ಡೀನ್‌ರಾದ ಡಾ. ಬಿ.ಜಿ. ಪ್ರಕಾಶ್‌ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿ ಮಣ್ಣಿನ ಭೌತಿಕ ಗುಣ ಕಾಪಾಡಿ



ಮಣ್ಣಿನ ಫಲವತ್ತತೆ ಹೆಚ್ಚಿಸಬೇಕು ಎಂದು ತಿಳಿಸಿದರು. ವಿಶ್ವ ಮಣ್ಣು ದಿನ–2018ರ ಅಂಗವಾಗಿ ಹಮ್ಮಿಕೊಂಡಿದ್ದ ತಾಂತ್ರಿಕ ಅಧಿವೇಶನವನ್ನು ಸಹ ವಿಸ್ತರಣಾ ನಿರ್ದೇಶಕರು, ತೋಟಗಾರಿಕೆಮಹಾವಿದ್ಯಾಲಯ, ಕೋಲಾರದ ಡಾ. ಟಿ. ಬಿ. ಬಸವರಾಜು, ಸಹಾಯಕ ಪ್ರಾಧ್ಯಾಪಕರಾದ ಡಾ. ಧನಂಜಯ ಬಿ.ಎನ್, ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ರಘುನಾಥ ರೆಡ್ಡಿ ಆರ್. ಎಲ್ ರವರು ನೇರವೇರಿಸಿಕೊಟ್ಟು ಸದರಿ ಕಾರ್ಯಕ್ರಮದಲ್ಲಿ ಮಣ್ಣು ನೈಸರ್ಗಿಕ ಸಂಪತ್ತು ಇದನ್ನು ಕಾಪಾಡುವುದು ಅವಶ್ಯವಾಗಿದೆ ಎಂದು ತಿಳಿಸುತ್ತ, ರೈತರಿಗೆ ಮಣ್ಣಿನ ಮಹತ್ವ, ಮುಖ್ಯ ಉದ್ದೇಶವು ಮಣ್ಣು ಪರೀಕ್ಷೆ ಆಧಾರದ ಮೇಲೆ ಶಿಫಾರಸು ಪ್ರಮಾಣದ ಗೊಬ್ಬರ ಬಳಕೆಗೆ ಉತ್ತೇಜನ, ಉತ್ಪಾದನಾ ವೆಚ್ಚ ತಗ್ಗಿಸುವುದು, ಸಾವಯವ ಗೊಬ್ಬರದಿಂದ ಉತ್ಪಾದನೆ ಹೆಚ್ಚಿಸುವುದು, ರೈತರ ಆದಾಯ ವೃದ್ಧಿಗೊಳಿಸುವುದು ಇತ್ಯಾದಿಗಳ ಬಗ್ಗೆ ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಕೆ. ತುಳಸಿರಾಮ್, ಹಿರಿಯ ವಿಜ್ಞಾನಿಗಳು ಹಾಗು ಮುಖ್ಯಸ್ಥರು, ಕೆ.ವಿ.ಕೆ., ಕೋಲಾರ ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ್ದರು.

## ರೈತ ದಿನಾಚರಣೆ 2018– ರೈತರ ಮತ್ತು ವಿಜ್ಞಾನಿಗಳ ಸಂವಾದ



ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಹಾಗೂ ಜೈ ಕಿಸಾನ್ ಜುವಾರಿ ಅಗ್ರೋ ಕೆಮಿಕಲ್ಸ್ ಪ್ರೈ. ಲಿ. ರವರ ಸಹಯೋಗದಲ್ಲಿ ದಿನಾಂಕ 23.12.2018 ರಂದು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ಶೈಕ್ಸ್ ಸಭಾಂಗಣದಲ್ಲಿ ರೈತ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯು ಪ್ರಗತಿಪರ ರೈತರು ಹಾಗೂ ಮುಖ್ಯ ಅತಿಥಿಗಳಿಂದ ನೆರವೇರಲ್ಪಟ್ಟಿತು. ರೈತ ದಿನಾಚರಣೆಯ ಮುಖ್ಯ ಉದ್ದೇಶ ಹಾಗೂ ರೈತ ಮಹನೀಯರ ಏಳಿಗೆಯಲ್ಲಿ ಶ್ರೀ. ಚೌದರಿ ಚರಣಸಿಂಗ್ ರವರ ಶ್ರಮ ಮತ್ತು ದೇಶದ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯಲ್ಲಿ ರೈತರ ಪಾತ್ರವನ್ನು ಶ್ರೀ ರುದ್ರಪ್ಪ, ಮುಖ್ಯ ವ್ಯವಸ್ಥಾಪಕರು, ಎ.ಡಿ.ಎಲ್, ಬೆಂಗಳೂರು, ರವರು ವಿವರಿಸಿದರು. ಕಾರ್ಯಕ್ರಮದ ತಾಂತ್ರಿಕ ಗೋಷ್ಠಿಯಲ್ಲಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ತೋಟಗಾರಿಕೆ ವಿಜ್ಞಾನಿಗಳಾದ ಡಾ. ನಾಗರಾಜ ಕೆ.ಎಸ್. ರವರು ಕೋಲಾರ



ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ತರಕಾರಿ ಬೆಳೆಗಳಲ್ಲಿ ಅಳವಡಿಸಿಕೊಳ್ಳಬೇಕಾದ ನೂತನ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಿ, ರೈತರ ಕೃಷಿ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರು. ಮುಂದುವರಿದು, ಪ್ರಕೃತಿಯ ಸಮತೋಲನ ಕಾಪಾಡಿಕೊಳ್ಳುವಲ್ಲಿ ಹಾಗೂ ಮಣ್ಣಿನ ಆರೋಗ್ಯದ ದೃಷ್ಟಿಯಲ್ಲಿ ಸಾವಯವ ಕೃಷಿಯ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿದರು. ಕಾರ್ಯಕ್ರಮದಲ್ಲಿ ಕೃಷಿಯಲ್ಲಿ ಸಾಧನೆಗೈದ ಪ್ರಗತಿಪರ ಕೃಷಿಕರನ್ನು ಸನ್ಮಾನಿಸಲಾಯಿತು. 100 ಕ್ಕೂ ಹೆಚ್ಚಿನ ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. 2018–19ರ ಆತ್ಮ ಯೋಜನೆಯಡಿಯಲ್ಲಿ ಕೃಷಿ ಇಲಾಖೆ, ಕೋಲಾರ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಮತ್ತು ಕೃಷಿ ವಿಜ್ಞಾನ ಕೇಂದ್ರ,

ಕೋಲಾರ ರವರ ಸಂಯುಕ್ತಾಶ್ರಯದಲ್ಲಿ **"ರೈತ ದಿನಾಚರಣೆ 2018"** ಕಾರ್ಯಕ್ರಮವನ್ನು ದಿನಾಂಕ 28.12.2018 ರಂದು ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದ ಶ್ರೀ. ಎಸ್.ಎನ್. ಮಂಜುನಾಥಗೌಡ,



ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋ.ವಿ.ವಿ ಬಾಗಲಕೋಟ ಇವರು ರೈತ ದೇಶದ ಬೆನ್ನೆಲುಬು, ಕೃಷಿಯಿಂದಲೇ ದೇಶದ ಏಳಿಗೆ ಸಾಧ್ಯ, ರೈತರ ಅಭಿವೃದ್ಧಿಯಲ್ಲಿ ಶ್ರೀ ಚೌದರಿ ಚರಣಸಿಂಗ್ ರವರ ಕಾರ್ಯಗಳು ಗಮನಾರ್ಹವಾಗಿದೆ ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ಸ್ಮರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ನಯೀಮ್ ಪಾಷಾ, ಉಪ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೋಲಾರರವರು ಮಾತನಾಡಿ ಕೃಷಿ ಇಲಾಖೆಯು ರೈತ ಪರ ಕೆಲಸಗಳನ್ನು ಉತ್ತಮ ರೀತಿಯಲ್ಲಿ ಮಾಡುತ್ತಿದ್ದು, ರೈತರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ರೈತರಲ್ಲಿ ಮನವಿ ಮಾಡಿದರು. ಕಾರ್ಯಕ್ರಮದ ಇನ್ನೋರ್ವ ಅತಿಥಿಯಾಗಿ ಭಾಗವಹಿಸಿದ್ದ ಪ್ರಗತಿಪರ ರೈತರಾದ ಶ್ರೀ. ಧರ್ಮಲಿಂಗಂ ರವರು ಮಾತನಾಡಿ, ಅತೀ ಹೆಚ್ಚು ರಾಸಾಯನಿಕ ಬಳಕೆಯಿಂದ ಭೂ ಮಾಲಿನ್ಯ ಹೆಚ್ಚಾಗುತ್ತಿದ್ದು, ಸಾವಯವ ಕೃಷಿಯೇ ಮಣ್ಣಿನ ಆರೋಗ್ಯದ ಜೀವಾಳವೆಂದು ಸಾವಯವ ಕೃಷಿಯ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿದರು. ರೈತ ದಿನಾಚರಣೆ ಪ್ರಯುಕ್ತ ನಡೆಸಿದ ರೈತ ವಿಜ್ಞಾನಿಗಳ ಸಂವಾದ ಕಾರ್ಯಕ್ರಮದಲ್ಲಿ ಡಾ. ಜೆ. ವೆಂಕಟೇಶ, ನಿವೃತ್ತ ಸಂಶೋಧನಾ ನಿರ್ದೇಶಕರು, ತೋವಿವಿ, ಬಾಗಲಕೋಟರವರು ಗೋಡಂಬಿ ಮತ್ತು ಮಾವು ಬೆಳೆಗಳಲ್ಲಿ ಉತ್ಕೃಷ್ಟ ಇಳುವರಿಗೆ ಹೊಸ ತಾಂತ್ರಿಕತೆಗಳ ಬಗ್ಗೆ, ಡಾ. ಕೃಷ್ಣ ಮನೋಹರ, ನಿವೃತ್ತ ಪ್ರಾಧ್ಯಾಪಕರು, ಜಿ.ಕೆ.ವಿ.ಕೆ, ಬೆಂಗಳೂರು ರವರು ತೋಟಗಾರಿಕೆ ಬೆಳೆಗಳಲ್ಲಿ ಸೂಕ್ಷ್ಮ ನೀರಾವರಿಯ ಅಳವಡಿಕೆ ಮತ್ತು ಮಹತ್ವದ ಬಗ್ಗೆ ಡಾ. ನೂರುಲ್ಲಾ ಹಾವೇರಿ, ವಿಜ್ಞಾನಿ (ಸಸ್ಯ ರೋಗಶಾಸ್ತ್ರ) ಕೆವಿಕೆ, ಕೋಲಾರ ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ರೋಗ ನಿರ್ವಹಣೆಯ ಬಗ್ಗೆ ಮತ್ತು ಕೆ. ತುಳಸಿರಾಮ್, ಹಿವಿಮು, ಕೆವಿಕೆ, ಕೋಲಾರ ರವರು ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಕೀಟ ನಿರ್ವಹಣೆಯ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರ ಮತ್ತು ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರದ ಭೋದಕ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ಕೃಷಿ ಮೇಳ–2018 ರಲ್ಲಿ ಭಾಗಿ



ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಹಮ್ಮಿಕೊಂಡಿದ್ದ, **"ಕೃಷಿ ಮೇಳ–2018"** ದಿನಾಂಕ: 16 ರಿಂದ 18ನೇ ನವೆಂಬರ್, 2018 ರಂದು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಿಂದ ನಿರ್ಮಿತವಾದ ಪ್ರದರ್ಶನ ಮಳಿಗೆಯಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದಿಂದ ಹಲವು ಬೆಳೆ ಮಾದರಿಗಳನ್ನು ಪ್ರದರ್ಶಿಸಲಾಯಿತು. ದಿನಾಂಕ 17.11.2018 ರಂದು ಕೃಷಿ ಮೇಳ 2018ರ ವೇದಿಕೆ ಕಾರ್ಯಕ್ರಮದಲ್ಲಿ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ **"ಕೃಷಿ ವಿಜ್ಞಾನ"** ಎಂಬ ವೈಜ್ಞಾನಿಕ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾದ **"ಒಣಬೇಸಾಯದಲ್ಲಿ ಹಿಪ್ಪುನೇರಳೆಯನ್ನು ಮರಗಳಾಗಿ ಅಭಿವೃದ್ದಿಪಡಿಸಿ ಯಶಸ್ವಿ ದ್ವಿತಳಿ ರೇಷ್ಮೆ ಕೃಷಿ ಕೈಗೊಂಡ ರೈತನ ಯಶೋಗಾಥೆ"** ರೈತರ ಅನುಭವಗಳನ್ನೊಳಗೊಂಡ ಅತ್ಯುತ್ತಮ ಲೇಖನಕ್ಕೆ ಡಾ. ಆರ್. ದ್ವಾರಕಿನಾಥ್ ಪ್ರಶಸ್ತಿಯನ್ನು ಡಾ. ಶಶಿಧರ್ ಕೆ. ಆರ್., ವಿಜ್ಞಾನಿ (ರೇಷ್ಮೆ ಕೃಷಿ), ಕೃಷಿ ವಿಜ್ಞಾನ ಕೇಂದ್ರ, ಕೋಲಾರ ರವರಿಗೆ ಪ್ರದಾನ ಮಾಡಲಾಯಿತು.



## ತೋಟಗಾರಿಕೆ ಮೇಳ–2018 ರಲ್ಲಿ ಭಾಗಿ







ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವತಿಯಿಂದ ದಿನಾಂಕ 23 ರಿಂದ 25ನೇ ಡಿಸೆಂಬರ್, 2018 ರವರೆಗೆ ಏರ್ಪಡಿಸಿದ್ದ **"ತೋಟಗಾರಿಕೆ ಮೇಳ"**ದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಭಾಗವಹಿಸಿದ್ದು ಕೋಲಾರ ಜಿಲ್ಲೆಯ ತೋಟಗಾರಿಕೆ ಕ್ಷೇತ್ರದಲ್ಲಿನ ಸಾಧನೆಯ ಮಾಹಿತಿ ಫಲಕಗಳು, ಸಜೀವ ಮಾದರಿಗಳು, ಬಿತ್ತಿಪತ್ರಗಳನ್ನು ಪ್ರದರ್ಶಿಸಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ. ಕೆ. ತುಳಸಿರಾಮ್, ವಿಜ್ಞಾನಿಗಳಾದ ಡಾ. ಕೆ.ಆರ್. ಶಶಿಧರ್, ಡಾ. ನೂರುಲ್ಲಾ ಹಾವೇರಿ, ಡಾ. ನಾಗರಾಜ ಕೆ.ಎಸ್ ಮತ್ತು ಡಾ. ಜಿ.ಎಸ್.ಚಿಕ್ಕಣ್ಣ ರವರು ಮೇಳದಲ್ಲಿ ಭಾಗವಹಿಸಿ ರೈತರಿಗೆ ತಾಂತ್ರಿಕ ಮಾಹಿತಿಗಳನ್ನು ನೀಡಿದರು.

## 2018ನೇ ಸಾಲಿನ ಕೋಲಾರ ಜಿಲ್ಲೆಯ ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿ ಪುರಸ್ಕೃತರು

2018–19ನೇ ಸಾಲಿನ ಜಿಲ್ಲಾ ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿಯನ್ನು ಕೋಲಾರ ಜಿಲ್ಲೆಯ ಶ್ರೀ. ವಿ. ಮುರಳಿ ಬಿನ್ ಎಸ್.ಎಮ್. ವೆಂಕಟಶಾಮಿರೆಡ್ಡಿ ಶೆಟ್ಟಿಹಳ್ಳಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. ಇವರಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯಲ್ಲಿ 23–25ನೇ ಡಿಸೆಂಬರ್ 2018 ರಂದು ನಡೆದ ತೋಟಗಾರಿಕೆ ಮೇಳದಲ್ಲಿ ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು. ಸದರಿ ರೈತರು ತಮ್ಮ ಜಮೀನಿನಲ್ಲಿ ಸಮಗ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ವಿವಿಧ ತರಕಾರಿ ಬೆಳೆಗಳಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಸಲಹೆಯ ಮೇರೆಗೆ ಕೃಷಿಯನ್ನು ನಿರ್ವಹಿಸಿ ಹೆಚ್ಚಿನ ಆದಾಯವನ್ನು ಪಡೆದು ಇತರೇ ಗ್ರಾಮಕ್ಕೆ ಮಾದರಿಯಾಗಿರುತ್ತಾರೆ.

## ತ್ರೈಮಾಸಿಕ ಕಾರ್ಯಾಗಾರ



ದಿನಾಂಕ 07.12.2018 ರಂದು ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರದ ವಿಚಾರ ಸಂಕೀರಣ ಕೊಠಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕೆ ಮಹಾವಿದ್ಯಾಲಯ ಮತ್ತು ತೋಟಗಾರಿಕೆ ಇಲಾಖೆ (ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು) ಇವರ ಸಂಯುಕ್ತ ಆಶ್ರಯದಲ್ಲಿ **ತ್ರೈಮಾಸಿಕ ಕಾರ್ಯಾಗಾರವನ್ನು** ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರವು ಆಲೂಗಡ್ಡೆ ಬೆಳೆಯ ಸಮಗ್ರ ನಿರ್ವಹಣಾ ಕ್ರಮಗಳ ವಿಷಯದ ಮೇಲೆ ಪ್ರಾಧಾನ್ಯತೆ ಹೊಂದಿತ್ತು. ಕಾರ್ಯಾಗಾರವನ್ನು ಕುರಿತು ಮಾತನಾಡಿದ ತೋಟಗಾರಿಕಾ ಮಹಾವಿದ್ಯಾಲಯದ ಡೀನ್‌ರಾದ ಡಾ. ಬಿ.ಜಿ. ಪ್ರಕಾಶರವರು ನೈಸರ್ಗಿಕ ವೈಪರೀತ್ಯ ಮತ್ತು ಬದಲಾಗುತ್ತಿರುವ ಮಳೆಯ ಮಾದರಿಗೆ ತಕ್ಕಂತೆ ತೋಟಗಾರಿಕೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಿಂದ ಆಗಮಿಸಿದ ಹಣ್ಣು ವಿಜ್ಞಾನದ ವಿಜ್ಞಾನಿಯಾದ ಡಾ. ಸೆಂತಿಲ್ ಕುಮಾರ್ ರವರು ತೋಟಗಾರಿಕೆ ಬೆಳೆಗಳಲ್ಲಿ ಸ್ವಯಂಚಾಲಿತ ಉಪಕರಣಗಳ ಬಗ್ಗೆ ಮಾಹಿತಿ



ನೀಡಿದರು. ನಂತರದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ನೂರುಲ್ಲಾ ಹಾವೇರಿರವರು ಆಲೂಗಡ್ಡೆಯಲ್ಲಿ ಬರುವ ರೋಗಗಳ ಸಮಗ್ರ ನಿರ್ವಹಣಾ ಕ್ರಮಗಳನ್ನು ತಿಳಿಸಿಕೊಟ್ಟರು. ಆಲೂಗಡ್ಡೆಯ ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಡಾ. ನಾಗರಾಜ ಕೆ.ಎಸ್, ವಿಜ್ಞಾನಿ (ತೋಟಗಾರಿಕೆ) ರವರು ಮಾಹಿತಿ ಕೊಟ್ಟರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್‌ರವರು ಆಲೂಗಡ್ಡೆಯಲ್ಲಿ ಬರುವ ಕೀಟಗಳ ಸಮಗ್ರ ನಿರ್ವಹಣಾ ಕ್ರಮಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ, ಕೋಲಾರದ ಉಪನಿರ್ದೇಶಕರಾದ ಶ್ರೀ. ಕೃಷ್ಣಮೂರ್ತಿ ಹಾಗೂ ಸುಮಾರು 40 ತೋಟಗಾರಿಕೆ ಸಹಾಯಕ ಅಧಿಕಾರಿಗಳು ಮತ್ತು ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ರೈತ ಕ್ಷೇತ್ರ ಪಾಠಶಾಲೆ



ದಿನಾಂಕ: 09.10.2018 ರಿಂದ 29.12.2018ರವರೆಗೆ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರದಿಂದ ಶ್ರೀ. ಬಿ. ನಾರಾಯಣಸ್ವಾಮಿಯವರ ತಾಕಿನಲ್ಲಿ **"ದ್ವಿತಳಿ ರೇಷ್ಮೆಹುಳು ಸಾಕಾಣಿಕೆಯಲ್ಲಿ ರೋಗ ನಿರ್ವಹಣೆ"** ಎಂಬ ವಿಷಯದ ಮೇಲೆ ಕೋಲಾರದ ತೊರಗನದೊಡ್ಡಿ ಗ್ರಾಮದಲ್ಲಿ **ರೈತ ಕ್ಷೇತ್ರ ಪಾಠಶಾಲೆ**ಯನ್ನು ಹಮ್ಮಿಕೊಳ್ಳಲಾಯಿತು. ಈ ಪಾಠಶಾಲೆಯಲ್ಲಿ ಕೆಳಕಂಡ ವಿಷಯಗಳ ಮೇಲೆ ರೈತರಿಗೆ ಮಾಹಿತಿ ನೀಡಲಾಯಿತು.

| ಕ್ರ.ಸಂ | ದಿನಾಂಕ | ತಾಂತ್ರಿಕ ಮಾಹಿತಿ ಹಾಗೂ ಸಂಪನ್ಮೂಲ ವ್ಯಕ್ತಿಗಳು |
|---|---|---|
| 1 | 09.10.2018 | **ರೇಷ್ಮೆ ಹುಳು ಸಾಕಾಣಿಕೆಯಲ್ಲಿ ವೈಜ್ಞಾನಿಕ ಸೋಂಕು ನಿವಾರಣೆ**<br>ಡಾ. ಶಶಿಧರ್ ಕೆ.ಆರ್. ವಿಜ್ಞಾನಿಗಳು (ರೇಷ್ಮೆಕೃಷಿ), ಕೆ.ವಿ.ಕೆ. ಕೋಲಾರ |
| 2 | 25.10.2018 | **ಜ್ವರದಲ್ಲಿರುವ ರೇಷ್ಮೆಹುಳು ನಿರ್ವಹಣೆ ಹಾಗೂ ಶಿಫಾರಿತ ಹಾಸಿಗೆ ಸೋಂಕು ನಿವಾರಕಗಳ ಕ್ರಮಬದ್ಧ ಬಳಕೆ**<br>ಡಾ. ಶಶಿಧರ್ ಕೆ.ಆರ್. ವಿಜ್ಞಾನಿಗಳು (ರೇಷ್ಮೆಕೃಷಿ), ಕೆ.ವಿ.ಕೆ. ಕೋಲಾರ |
| 3 | 13.11.2018 | **ರೋಗ ನಿರ್ವಹಣೆಯಲ್ಲಿ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪಿನ ಮಹತ್ವ**<br>ಡಾ. ಆರ್.ಎಲ್. ರಘುನಾಥರೆಡ್ಡಿ, ವಿಜ್ಞಾನಿಗಳು (ಮಣ್ಣುವಿಜ್ಞಾನ), ಕೆ.ವಿ.ಕೆ. ಕೋಲಾರ |
| 4 | 29.11.2018 | **ದ್ವಿತಳಿ ಹುಳು ಸಾಕಾಣಿಕೆಯಲ್ಲಿ ಸೂಕ್ತ ವಾತವರಣ ಮತ್ತು ಸ್ಥಳಾವಕಾಶ ನಿರ್ವಹಣೆ**<br>ಶ್ರೀ. ಎಸ್.ಎನ್. ಶ್ರೀನಿವಾಸ್, ರೇಷ್ಮೆ ಸಹಾಯಕ ನಿರ್ದೇಶಕರು, ರೇಷ್ಮೆ ಇಲಾಖೆ, ಬಂಗಾರಪೇಟೆ |
| 5 | 15.12.2018 | **ದ್ವಿತಳಿ ರೇಷ್ಮೆಹುಳು ಸಾಕಾಣಿಕೆಯಲ್ಲಿ ಅಧುನಿಕ ತಾಂತ್ರಿಕತೆಗಳು**<br>ಡಾ. ಎಂ ನೋಬಲ್ ಮೋರಿಸನ್, ವಿಜ್ಞಾನಿಗಳು "ಡಿ", ರೇಷ್ಮೆ ವಿಸ್ತರಣಾ ಕೇಂದ್ರ, ಮಡಿವಾಳ |
| 6 | 29.12.2018 | **ಗುಣಮಟ್ಟದ ಗೂಡು ಉತ್ಪಾದನೆಯಲ್ಲಿ ಚಂದ್ರಿಕೆಗಳ ಮಹತ್ವ ಮತ್ತು ಬಳಕೆ**<br>ಡಾ. ಶಶಿಧರ್ ಕೆ.ಆರ್. ವಿಜ್ಞಾನಿಗಳು (ರೇಷ್ಮೆಕೃಷಿ), ಕೆ.ವಿ.ಕೆ. ಕೋಲಾರ |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ

ದಿನಾಂಕ: 03.10.2018 ರಂದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಹೆಚ್. ಕೊತೂರು ಗ್ರಾಮದಲ್ಲಿ ಪಪ್ಪಾಯ ಉಂಗುರ ಚುಕ್ಕೆ ನಂಜು ರೋಗದ ಸಮಸ್ಯಾತ್ಮಕ ಕ್ಷೇತ್ರಕ್ಕೆ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಶಶಿಧರ್ ಕೆ.ಆರ್, ಡಾ. ನೂರುಲ್ಲಾ ಹಾವೇರಿ ಹಾಗೂ ಡಾ. ನಾಗರಾಜ ಕೆ.ಎಸ್. ಭೇಟಿ ಕೊಟ್ಟು ಸೂಕ್ತ ನಿರ್ವಹಣಾ ಕ್ರಮಗಳ ಬಗ್ಗೆ ರೈತರಿಗೆ ಮಾಹಿತಿಯನ್ನು ನೀಡಿದರು. ಸದರಿ ತಾಲ್ಲೂಕಿನ ಉತ್ತನೂರು ಗ್ರಾಮದಲ್ಲಿ ಹಿಪ್ಪುನೇರಳೆಯಲ್ಲಿ ಕಾಂಡಕೊರಕದ ಬಾಧೆಯ ಕ್ಷೇತ್ರಕ್ಕೆ ಭೇಟಿ ನೀಡಿ ವಿಜ್ಞಾನಿಗಳು ಕೂಲಂಕುಷವಾಗಿ ಪರಿಶೀಲಿಸಿದರು. ಡಾ. ಶಶಿಧರ್ ಕೆ.ಆರ್, ವಿಜ್ಞಾನಿ ರೇಷ್ಮೆ ಕೃಷಿರವರು ಕಾಂಡಕೊರಕದ ನಿರ್ವಹಣೆಯ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡಿದರು.



ದಿನಾಂಕ: 27.12.2018 ರಂದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಬೈರಕೂರು ಹೋಬಳಿಯ ಪುಣ್ಯಹಳ್ಳಿ ಗ್ರಾಮದಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರು, ಮುಳಬಾಗಿಲು ಮತ್ತು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ರವರ ಸಹಭಾಗಿತ್ವದೊಂದಿಗೆ ಟೊಮ್ಯಾಟೊ ಬೆಳೆಯ ಸಮಸ್ಯಾತ್ಮಕ ಕ್ಷೇತ್ರ ಭೇಟಿಯನ್ನು ಮಾಡಲಾಯಿತು. ಈ ಕ್ಷೇತ್ರ ಭೇಟಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಕೆ. ತುಳಸಿರಾಮ್ ಮತ್ತು ವಿಜ್ಞಾನಿಗಳಾದ ಡಾ. ನೂರುಲ್ಲಾ ಹಾವೇರಿ ಹಾಗೂ ಡಾ. ನಾಗರಾಜ ಕೆ. ಎಸ್. ರವರು ಟೊಮ್ಯಾಟೊ ಬೆಳೆಯಲ್ಲಿ ಹೂವು ಉದುರುವಿಕೆ ಮತ್ತು ಕಾಯಿಯ ಗಾತ್ರದಲ್ಲಿ ವ್ಯತ್ಯಾಸದ ಕಾರಣಗಳು ಮತ್ತು ಅದರ ನಿರ್ವಹಣಾ ಕ್ರಮಗಳ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡಿದರು.



**ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರದಿಂದ ಸ್ವಚ್ಛತಾ ಪಾಕ್ಷೀಕ (16.12.2018 ರಿಂದ 31.12.2018 ರವರೆಗೆ) ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಚಟುವಟಿಕೆಯ ವಿವರ**

| ದಿನಾಂಕ | ಚಟುವಟಿಕೆ | ಸ್ಥಳ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|
| 16.12.2018 | ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಿಂದ ಮತ್ತು ಬೋಧಕೇತರ ಸಿಬ್ಬಂದಿಗಳಿಂದ ಸ್ವಚ್ಛತಾ ಕಾರ್ಯಕ್ರಮಕ್ಕೆ ಪ್ರತಿಜ್ಞೆ ಸ್ವೀಕಾರ | ಕೆವಿಕೆ, ಕೋಲಾರ | – |
| 17.12.2018 | ಕೃಷಿ ವಿಜ್ಞಾನ ಕೇಂದ್ರ ಕಛೇರಿಗೆ ಸಂಬಂಧಪಟ್ಟ ದಾಖಲೆಗಳನ್ನು ಡಿಜಿಟಲೈಜೇಶನ್‌ಗೊಳಿಸುವಿಕೆಯ ಮೂಲಕ ಇ–ಕಛೇರಿ ಅನುಷ್ಠಾನ | ಕೆವಿಕೆ, ಕೋಲಾರ | – |
| 19.12.2018 | ಕೋಲಾರದ ತಾಯಲೂರಿನ ಶ್ರೀ ವಿನಾಯಕ ರೈತ ಉತ್ಪಾದಕ ಸಂಸ್ಥೆಯ ಕಛೇರಿಯಲ್ಲಿ ಸ್ವಚ್ಛತಾ ಪಾಕ್ಷಿಕ ಕಾರ್ಯಕ್ರಮದ ಅಡಿಯಲ್ಲಿ ರೈತರಿಗೆ ಸುರಕ್ಷಿತ ತ್ಯಾಜ್ಯಗಳ ನಿರ್ಮೂಲನೆಯ ಬಗ್ಗೆ ಅರಿವು | ತಾಯಲೂರು, ಮುಳಬಾಗಿಲು | 60 |
| 20.12.2018 | ಕೃಷಿ ತಾಂತ್ರಿಕತೆಯಲ್ಲಿ ತ್ಯಾಜ್ಯಗಳ ಮರುಬಳಕೆಯಿಂದ ನೈರ್ಮಲ್ಯತೆ ಕಾಪಾಡುವಿಕೆ | ಕೆವಿಕೆ, ಕೋಲಾರ | 50 |
| 21.12.2018 | ರೇಷ್ಮೆ ಹುಳುವಿನ ಹಾಸಿಗೆ ತ್ಯಾಜ್ಯದ ಮರುಬಳಕೆಯೊಂದಿಗೆ ಕಾಂಪೋಸ್ಟ್ ತಯಾರಿಕೆ | ಚಾಕಪಲ್ಲಿ, ಶ್ರೀನಿವಾಸಪುರ | 60 |
| 21.12.2018 | ಎರೆಹುಳು ಗೊಬ್ಬರ ತಯಾರಿಕೆಯಲ್ಲಿ ಕೃಷಿ ತ್ಯಾಜ್ಯದ ಬಳಕೆ | ಶಾನಭೋಗನಹಳ್ಳಿ ಕೋಲಾರ | 40 |
| 22.12.2018 | ರೇಷ್ಮೆಕೃಷಿ ತಾಂತ್ರಿಕತೆಯಲ್ಲಿ ತ್ಯಾಜ್ಯಗಳ ಮರುಬಳಕೆಯಿಂದ ನೈರ್ಮಲ್ಯತೆ ಕಾಪಾಡುವಿಕೆ | ಕಾಡುದೇವಾಂಡಹಳ್ಳಿ ಶ್ರೀನಿವಾಸಪುರ | 50 |
| 29.12.2018 | ಕಾಂಪೋಸ್ಟ್ ತಯಾರಿಕೆಯಲ್ಲಿ **ವೇಸ್ಟ್ ಡಿಕಂಪೋಸರ್**‌ನ ಬಳಕೆ | ತೊರಗನದೊಡ್ಡಿ, ಬಂಗಾರಪೇಟೆ | 30 |








## ಬೆಳೆ ಕ್ಷೇತ್ರೋತ್ಸವ

ಅಕ್ಟೋಬರ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ವಿವಿಧ ಬೆಳೆಗಳಲ್ಲಿ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರದಿಂದ ಹಮ್ಮಿಕೊಂಡ 'ಬೆಳೆ ಕ್ಷೇತ್ರೋತ್ಸವ'ದ ವಿವರ ಈ ಕೆಳಕಂಡತಿದೆ.

| ದಿನಾಂಕ | ಸ್ಥಳ | ವಿಷಯ | ಭಾಗವಹಿಸಿದ ವಿಜ್ಞಾನಿಗಳು | ಭಾಗವಹಿಸಿದ ರೈತರು |
|---|---|---|---|---|
| 10.10.2018 | ಯಡಹಳ್ಳಿ, ಕೋಲಾರ | ಚೆಂಡು ಹೂವು ಬೆಳೆಯ ಸಮಗ್ರ ನಿರ್ವಹಣೆ | ಡಾ. ನೂರುಲ್ಲಾ ಹಾವೇರಿ ಮತ್ತು ಡಾ. ನಾಗರಾಜ ಕೆ.ಎಸ್ | 30 |
| 13.11.2018 | ಮುರಾಂಡಹಳ್ಳಿ | ಅಧಿಕ ಹಿಪ್ಪುನೇರಳೆ ಇಳುವರಿಗೆ ಸಾವಯವ ಆಧಾರಿತ ಪೋಷಕಾಂಶಗಳ ಬಳಕೆ. | ಡಾ. ಶಶಿಧರ್ ಕೆ.ಆರ್ ಮತ್ತು ಉಮೇಶ ನಾಯ್ಕ | 30 |
| 14.12.2018 | ಉರಿಗಿಲಿ | ಹಿಪ್ಪುನೇರಳೆಯಲ್ಲಿ ಎಲೆ ಸುರುಳಿ ಕೀಟದ ಸಮಗ್ರ ನಿರ್ವಹಣೆ | ಕೆ. ತುಳಸಿರಾಮ್ ಮತ್ತು ಡಾ. ಶಶಿಧರ್ ಕೆ.ಆರ್ | 40 |

## ತರಬೇತಿ ಕಾರ್ಯಕ್ರಮಗಳು



ಅಕ್ಟೋಬರ್–ಡಿಸೆಂಬರ್ 2018 ರಲ್ಲಿ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರದಿಂದ ಒಟ್ಟು 25 ತರಬೇತಿಗಳನ್ನು ಹಮ್ಮಿಕೊಂಡಿದ್ದು (ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಬೆಳೆಗಳಲ್ಲಿ) 1662 ಒಟ್ಟು ರೈತರು ಭಾಗವಹಿಸಿರುತ್ತಾರೆ. ಈ ತರಬೇತಿ ಕಾರ್ಯಕ್ರಮಗಳಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಕೆ. ತುಳಸಿರಾಮ್, ಡಾ. ರಘುನಾಥರೆಡ್ಡಿ ಆರ್.ಎಲ್, ವಿಜ್ಞಾನಿ (ಮಣ್ಣು ವಿಜ್ಞಾನ), ಡಾ. ಶಶಿಧರ್ ಕೆ.ಆರ್, ವಿಜ್ಞಾನಿ (ರೇಷ್ಮೆ ಕೃಷಿ), ಡಾ. ನೂರುಲ್ಲಾ ಹಾವೇರಿ, ವಿಜ್ಞಾನಿ (ಸಸ್ಯ ರೋಗಶಾಸ್ತ್ರ), ಡಾ. ನಾಗರಾಜ ಕೆ.ಎಸ್, ವಿಜ್ಞಾನಿ (ತೋಟಗಾರಿಕೆ) ಮತ್ತು ಡಾ. ಚಿಕ್ಕಣ್ಣ ಜಿ.ಎಸ್, ವಿಜ್ಞಾನಿ (ಗೃಹ ವಿಜ್ಞಾನ)







ರವರು ಮಣ್ಣಿನ ನಿರ್ವಹಣೆ, ಸುಧಾರಿತ ಬೇಸಾಯ ಪದ್ಧತಿ, ಕೀಟ ಮತ್ತು ರೋಗಗಳ ನಿರ್ವಹಣೆ ಹಾಗೂ ಮೌಲ್ಯವರ್ಧನೆಯ ಬಗ್ಗೆ ರೈತರಿಗೆ ತರಬೇತಿ ನೀಡಿರುತ್ತಾರೆ.

## "ರೈತ ಉತ್ಪಾದಕರ ಸಂಸ್ಥೆ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಪರ್ಕ" ಕಾರ್ಯಕ್ರಮ

ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಸಹಯೋಗದಲ್ಲಿ **"ರೈತ ಉತ್ಪಾದಕರ ಸಂಸ್ಥೆ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಪರ್ಕ"** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳನ್ನು ಈ ಕೆಳಗಿನ ರೈತ ಉತ್ಪಾದಕರ ಸಂಸ್ಥೆಗಳಿಗೆ ವೈಜ್ಞಾನಿಕ ತಂಡದ ಮುಖ್ಯಸ್ಥರಾಗಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದಿಂದ ಆದೇಶಿಸಲಾಯಿತು.

| ಕ್ರ.ಸಂ | ರೈತ ಉತ್ಪಾದಕರ ಸಂಸ್ಥೆಯ ಹೆಸರು | ವ್ಯಾಪ್ತಿಗೆ ಬರುವ ತೋಟಗಾರಿಕೆ ಇಲಾಖೆ ಕಛೇರಿ | ವೈಜ್ಞಾನಿಕ ತಂಡದ ಮುಖ್ಯಸ್ಥರು ಮತ್ತು ಸಹ ಮುಖ್ಯಸ್ಥರು |
|---|---|---|---|
| 1. | ಶ್ರೀ. ವೇಣುಗೋಪಾಲ ಸ್ವಾಮಿ ರೈತ ಉತ್ಪಾದಕರ ಸಂಸ್ಥೆ, ದೊಡ್ಡದೇನಹಳ್ಳಿ | ಸಹಾಯಕ ತೋಟಗಾರಿಕೆ ನಿರ್ದೇಶಕರು, ಹೊಸಕೋಟೆ | ಡಾ. ರಘುನಾಥರೆಡ್ಡಿ ಆರ್.ಎಲ್. ಮತ್ತು ಡಾ. ನೂರುಲ್ಲಾ ಹಾವೇರಿ |
| 2. | ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ರೈತ ಉತ್ಪಾದಕರ ಸಂಸ್ಥೆ, ರಾಜೇನಹಳ್ಳಿ | ಸಹಾಯಕ ತೋಟಗಾರಿಕೆ ನಿರ್ದೇಶಕರು, ಮಾಲೂರು | ಡಾ. ನೂರುಲ್ಲಾ ಹಾವೇರಿ ಮತ್ತು ಡಾ. ಶಶಿಧರ್ ಕೆ.ಆರ್ |
| 3. | ಶ್ರೀ. ವಿನಾಯಕ ರೈತ ಉತ್ಪಾದಕರ ಸಂಸ್ಥೆ, ತಾಯಲೂರು | ಸಹಾಯಕ ತೋಟಗಾರಿಕೆ ನಿರ್ದೇಶಕರು, ಮುಳಬಾಗಿಲು | ಡಾ. ನಾಗರಾಜ ಕೆ. ಎಸ್ ಮತ್ತು ಡಾ. ಚಿಕ್ಕಣ್ಣ ಜಿ.ಎಸ್. |



‘ರೈತ ಉತ್ಪಾದಕರ ಸಂಸ್ಥೆ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಪರ್ಕ ಕಾರ್ಯಕ್ರಮ’ದ ಅಡಿಯಲ್ಲಿ ದಿನಾಂಕ 30.11.2018 ರಂದು ಶ್ರೀ. ವೇಣುಗೋಪಾಲ ಸ್ವಾಮಿ ರೈತ ಉತ್ಪಾದಕರ ಸಂಸ್ಥೆ, ದೊಡ್ಡದೇನಹಳ್ಳಿ ಗ್ರಾಮದಲ್ಲಿ ಕ್ಯಾರೆಟ್ ಮತ್ತು ಸೀಬೆ ಬೆಳೆಯಲ್ಲಿ ಸೂಕ್ಷ್ಮಪೋಷಕಾಂಶಗಳ ನಿರ್ವಹಣೆಯ ಮೇಲೆ ಮತ್ತು ದಿನಾಂಕ 18.12.2018 ರಂದು ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ರೈತ ಉತ್ಪಾದಕರ ಸಂಸ್ಥೆ, ರಾಜೇನಹಳ್ಳಿ ಗ್ರಾಮದಲ್ಲಿ



ಹೀರೆಕಾಯಿ ಮತ್ತು ಪೋಲ್ ಬೀನ್ಸ್ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಮೇಲೆ ಹಾಗು ದಿನಾಂಕ 19.12.2018 ರಂದು ಶ್ರೀ. ವಿನಾಯಕ ರೈತ ಉತ್ಪಾದಕರ ಸಂಸ್ಥೆ, ತಾಯಲೂರು ಗ್ರಾಮದಲ್ಲಿ ಆಲೂಗಡ್ಡೆ ಮತ್ತು ಮಾವು ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಮೇಲೆ ಪ್ರಾತ್ಯಕ್ಷಿಕೆ ಕೈಗೊಳ್ಳಲಾಯಿತು. ಮುಂದುವರಿದು ಬೆಳೆಗಳ ವಿವಿಧ ಹಂತಗಳಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳು ಕ್ಷೇತ್ರ ಭೇಟಿಮಾಡಿ ರೈತರಿಗೆ ಸಲಹೆಗಳನ್ನು ನೀಡಿದರು.

**ರೈತ ಉತ್ಪಾದಕರ ಸಂಸ್ಥೆ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಪರ್ಕ ಕಾರ್ಯಕ್ರಮದ ಅಡಿಯಲ್ಲಿ ಆಯೋಜಿಸಲಾದ ತರಬೇತಿ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.**





| ಕ್ರ. ಸಂ | ದಿನಾಂಕ | ತರಬೇತಿ ವಿಷಯ | ಸ್ಥಳ | ಭಾಗವಹಿಸಿದ ರೈತರ ಸಂಖ್ಯೆ | ಸಂಯೋಜಿಸಿದ ವಿಜ್ಞಾನಿಗಳು |
|---|---|---|---|---|---|
| **1.** | 05.11.2018 | ಟೊಮ್ಯಾಟೊ, ಡೊಣ್ಣಮೆಣಸಿನಕಾಯಿ ಮತ್ತು ಪೋಲ್ ಬೀನ್ಸ್ ಬೆಳೆಗಳಲ್ಲಿ ಸುಧಾರಿತ ಬೇಸಾಯ ಕ್ರಮಗಳು | ಅತ್ತಿವಟ್ಟ, ಹೊಸಕೋಟೆ | 50 | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನೂರುಲ್ಲಾ ಹಾವೇರಿ ಡಾ. ನಾಗರಾಜ ಕೆ. ಎಸ್ ಮತ್ತು ಕೆ. ತುಳಸಿರಾಮ್ |
| **2.** | 24.11.2018 | ಆಲೂಗಡ್ಡೆ, ಡೊಣ್ಣಮೆಣಸಿನಕಾಯಿ ಮತ್ತು ಹಿರೇಕಾಯಿ ಬೆಳೆಗಳಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ | ದೊಡ್ಡಕಲ್ಲಹಳ್ಳಿ | 65 | ಡಾ. ನೂರುಲ್ಲಾ ಹಾವೇರಿ ಮತ್ತು ಕೆ. ತುಳಸಿರಾಮ್ |
| **3.** | 30.11.2018 | ಟೊಮ್ಯಾಟೊ, ಡೊಣ್ಣಮೆಣಸಿನಕಾಯಿ ಮತ್ತು ಪೋಲ್ ಬೀನ್ಸ್ ಬೆಳೆಗಳಲ್ಲಿ ಸುಧಾರಿತ ಬೇಸಾಯ ಕ್ರಮಗಳು | ಅತ್ತಿವಟ್ಟ, ಹೊಸಕೋಟೆ | 57 | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನೂರುಲ್ಲಾ ಹಾವೇರಿ ಡಾ. ನಾಗರಾಜ ಕೆ. ಎಸ್ ಮತ್ತು ಕೆ. ತುಳಸಿರಾಮ್ |
| **4.** | 10.12.2018 | ಮಾವಿನ ಬೆಳೆಯಲ್ಲಿ ಸಮಗ್ರ ಕೃಷಿ ಪದ್ಧತಿ | ಕೆವಿಕೆ, ಕೋಲಾರ | 35 | ಡಾ. ನಾಗರಾಜ ಕೆ. ಎಸ್, ಡಾ. ಚಿಕ್ಕಣ್ಣ ಜಿ.ಎಸ್ ಮತ್ತು ಕೆ. ತುಳಸಿರಾಮ್ |
| **5.** | 13.12.2018 | ಟೊಮ್ಯಾಟೊ, ಡೊಣ್ಣಮೆಣಸಿನಕಾಯಿ ಮತ್ತು ಗಜ್ಜರಿ ಬೆಳೆಗಳಲ್ಲಿ ಸಮಗ್ರ ಬೇಸಾಯ | ಆನಗೊಂಡಹಳ್ಳಿ | 30 | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನೂರುಲ್ಲಾ ಹಾವೇರಿ ಡಾ. ನಾಗರಾಜ ಕೆ. ಎಸ್ ಮತ್ತು ಕೆ. ತುಳಸಿರಾಮ್ |
| **6.** | 18.12.2018 | ಆಲೂಗಡ್ಡೆ, ಹಿರೇಕಾಯಿ ಮತ್ತು ಪೋಲ್ ಬೀನ್ಸ್ ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣೆ | ವರದಾಪುರ, ಮಾಲೂರು | 35 | ಡಾ. ನೂರುಲ್ಲಾ ಹಾವೇರಿ ಡಾ. ನಾಗರಾಜ ಕೆ. ಎಸ್ ಮತ್ತು ಕೆ. ತುಳಸಿರಾಮ್ |
| **7.** | 19.12.2018 | ಆಲೂಗಡ್ಡೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ತಾಯಲೂರು, ಮುಳಬಾಗಿಲು | 63 | ಡಾ. ನಾಗರಾಜ ಕೆ. ಎಸ್, ಕೆ. ತುಳಸಿರಾಮ್ ಮತ್ತು ಡಾ. ನೂರುಲ್ಲಾ ಹಾವೇರಿ |


ಸಂಪಾದಕರು : ಕೆ. ತುಳಸಿರಾಮ್
ಸಹ ಸಂಪಾದಕರು : ಡಾ. ನಾಗರಾಜ ಕೆ.ಎಸ್
ಸಹಾಯಕ ಸಂಪಾದಕರು : ಡಾ. ರಘುನಾಥರೆಡ್ಡಿ ಆರ್.ಎಲ್
ಡಾ. ಶಶಿಧರ್ ಕೆ.ಆರ್
ಡಾ. ನೂರುಲ್ಲಾ ಹಾವೇರಿ
ಡಾ. ಚಿಕ್ಕಣ್ಣ ಜಿ.ಎಸ್
ಉಮೇಶ ನಾಯ್ಕ
ಪುಟ ವಿನ್ಯಾಸ : ಸಿ.ಎಸ್. ಜ್ಞಾನಸುಧಾ
ಅಕ್ಷರ ಜೋಡಣೆ : ಸಾವಿತ್ರಿ ಜಿ. ರುದ್ರಾಪೂರ
ಸಹಾಯಕರು : ರವಿಶಂಕರ್ ಹೆಚ್.ಎಂ.

ಪ್ರಕಾಶಕರು
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು,
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರ– 563 103.





**ಪ್ರತಿ ಸೋಮವಾರ – ರೈತರಿಗೆ ಪರಿಹಾರ**
ಸ್ಥಳ : ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ
ಕೃಷಿ ವಿಜ್ಞಾನ ಕೇಂದ್ರ, ಕೋಲಾರ
ಸಮಯ : ಬೆಳಗ್ಗೆ 9.30 ರಿಂದ ಸಂಜೆ 4.30